**ಸಾಕ್ಷಿಗೆ ದಿನಾಂಕ 15.12.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: *2* ನೇ ಎದುರುದಾರರ ಪರ ಶ್ರೀಮತಿ ಪಿ ಬಿ ಸಿ ವಕೀಲರಿಂದ:**

1. ನಾನು ಅರ್ಜಿದಾರರಿಗೆ ಮೂಲತಃ ಚಿಕಿತ್ಸೆಯನ್ನು ನೀಡಿದ ವೈದ್ಯನಾಗಿರುವುದಿಲ್ಲ. ಅರ್ಜಿದಾರರಿಗೆ ಅಳವಡಿಸಲಾಗಿದ್ದ ಒಳಜೋಡಣೆಯನ್ನು ಹೊರೆತೆಗೆಯುವಾಗ ಅರ್ಧ ಒಳಜೋಡಣೆ ಮಾತ್ರ ತೆಗೆದಿದ್ದು, ಉಳಿದ ಅರ್ಧ ಭಾಗ ಅರ್ಜಿದಾರರ ಮೂಳೆಮುರಿತದಲ್ಲಿ ಇರುತ್ತದೆ. ಒಳಜೋಡಣೆ ಸಂಪೂರ್ಣವಾಗಿ ಹೊರತೆಗೆಯಲು ಸಾಧ್ಯವಾಗದಕ್ಕೆ ಕಾರಣ ಶಸ್ತ್ರಚಿಕಿತ್ಸೆಯಲ್ಲಿ ಉಂಟಾದ ವ್ಯತ್ಯಾಸ. ಅರ್ಜಿದಾರರ ಅರ್ಧ ಒಳಜೋಡಣೆ ಅವರ ಶಸ್ತ್ರಚಿಕಿತ್ಸೆ ಮಾಡಿ ಒಳಜೋಡಣೆ ಅಳವಡಿಸಿದ ನಂತರ ಅದನ್ನು ಹೊರತೆಗೆಯುವ ಪೂರ್ವದಲ್ಲಿ ಅಂದರೆ ಮಧ್ಯದ ಅವಧಿಯಲ್ಲಿ ಒಳಜೋಡಣೆ ತುಂಡಾಗಿರುತ್ತದೆ, ಅದನ್ನು ಹೊರತುಪಡಿಸಿದರೆ ಉಳಿದ ಮೂಳೆಮುರಿತ ಕೂಡಿಕೊಂಡಿರುತ್ತದೆ. ಅರ್ಜಿದಾರರು ಏನು ಕೆಲಸ ಮಾಡುತ್ತಾರೆ ಎಂದು ಕೇಳಿ ತಿಳಿದುಕೊಂಡಿರುವುದಿಲ್ಲ. ಅರ್ಜಿದಾರರಿಗೆ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದ 7 ನೇ ಕಂಡಿಕೆಯಲ್ಲಿ ತೊಂದರೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರ ಮುಂದುವರೆದ ಶಸ್ತ್ರಚಿಕಿತ್ಸೆಗೆ ರೂ.1,50,000/- ಖರ್ಚಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಉಂಟಾದ ಮೂಳೆಮುರಿತ ಕೂಡಿಕೊಂಡಿರುವುದರಿಂದ ಅರ್ಜಿದಾರರಿಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಸಿಗಲಿ ಎನ್ನುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: 1ನೇ ಎದುರುದಾರರು ಏಕಪಕ್ಷೀಯ. ಈ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.**

**ಮರು ವಿಚಾರಣೆ: ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**
**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**